# ಉಪನಿಷತ್ತುಗಳ ಪ್ರಸ್ತುತತೆ

ಸ್ವಾಮಿ ಗೌತಮಾನಂದ

### ಉಪನಿಷತ್ತುಗಳ ಆವಶ್ಯಕತೆ

**ಆ**ಧುನಿಕ ವಿಜ್ಞಾನ ಮತ್ತು ತಾಂತ್ರಿಕತೆಗಳು ಜನರ ಪರಂಪರಾಗತ ಮೌಲ್ಯಗಳನ್ನೂ, ವಿಚಾರಗಳನ್ನೂ ಮತ್ತು ನಂಬಿಕೆಗಳನ್ನೂ ತಲೆಕೆಳಗಾಗಿ ಬದಲಾಯಿಸಿಬಿಟ್ಟಿವೆ. ಆಧ್ಯಾತ್ಮಿಕ ಮೌಲ್ಯಗಳಿಗಿಂತ ಜಡಪದಾರ್ಥಗಳಿಗೇ ಹೆಚ್ಚು ಮಹತ್ವ ಸಿಗುತ್ತಿದೆ. ಈಗಿನ ಜನರು ಆತ್ಮಸಂಯಮವನ್ನು ಅರ್ಥವಿಲ್ಲದ ಆಚರಣೆ ಎನ್ನುತ್ತಿದ್ದಾರೆ. ಆಧ್ಯಾತ್ಮಿಕ ವಿಷಯವನ್ನು ಬಿಟ್ಟು, ಭೌತಿಕ ವಸ್ತುಗಳಿಗಾಗಿ ಧ್ಯಾನ-ಧಾರಣೆಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಆಸ್ತಿಕರನ್ನು "ನಿಮ್ಮ ಶಾಸ್ತ್ರ ಸತ್ಯ ಎಂದು ಹೇಗೆ ಸಾಬೀತುಪಡಿಸುತ್ತೀರಿ?" ಎಂದು ಭೌತಿಕ ವಿಜ್ಞಾನ ಕೇಳುತ್ತಿದೆ; ಬೈಬಲ್ ಮುಂತಾದ ಧರ್ಮಗ್ರಂಥಗಳಲ್ಲಿ ಇರುವ ಸೃಷ್ಟಿ, ಪ್ರಳಯ, ಸ್ವರ್ಗ, ನರಕ, ಪಾಪ, ಪುಣ್ಯ ಎಲ್ಲವನ್ನೂ ವಿಚಾರದ ಒರೆಗಲ್ಲಿಗೆ ಹಾಕಿ, ಅವೆಲ್ಲ ಮೂಢರ ನಂಬಿಕೆ ಎನ್ನುತ್ತಿದೆ!

ಈ ಪರಿಸ್ಥಿತಿಯಲ್ಲಿ ಪಾಶ್ಚಾತ್ಯ ವಿಚಾರವಾದಿಗಳು ಮತ್ತು ಅವರ ಹಿಂಬಾಲಕರಾದ ನಮ್ಮ ದೇಶದವರು ಹೊಸಹೊಸದಾಗಿ ಹುಟ್ಟಿಕೊಳ್ಳುತ್ತಿರುವ, ಮಾನವೀಯತಾವಾದ (Humanism), ದ್ರಷ್ಟಾರವಾದ (Prophetism), ವಿಶ್ವಮಾನವತಾವಾದ (Universalism), ನವಯುಗಧರ್ಮ (New Ageism), ಮೂಲಭೂತವಾದ (Fundamentalism) ಇತ್ಯಾದಿಗಳಿಗೆ ಆಕರ್ಷಿತರಾಗುತ್ತಿದ್ದಾರೆ. ಇವುಗಳಲ್ಲಿ ಮಾನವತಾವಾದವು ಮಾನವನ ಘನತೆಯನ್ನು ಎತ್ತಿ ಹಿಡಿಯುತ್ತದೆ. ದ್ರಷ್ಟಾರವಾದವು, ಮುಂದೊಮ್ಮೆ ಈ ಜಗತ್ತಿನಲ್ಲಿಯೇ ಸ್ವರ್ಗವು ಮೂಡುತ್ತದೆ ಎಂದು ಹೇಳುತ್ತದೆ. ಹೊಸಯುಗಧರ್ಮವು ಈಗಿನ ಕಾಲದ ಜ್ವಲಂತ ಸಮಸ್ಯೆಗಳಿಗೆ ಉತ್ತರವನ್ನು ಕಂಡುಹಿಡಿಯುವುದರಲ್ಲಿ ತೊಡಗಿದೆ. ಮೂಲಭೂತವಾದವು ಹಳೆಯದೇ ಶ್ರೇಷ್ಠ ಎಂಬ ಸಂಕುಚಿತ ಭಾವನೆಯಿಂದ ಕೂಡಿದೆ. ಈ ಎಲ್ಲ ವಾದಗಳೂ ಆಧ್ಯಾತ್ಮಿಕ ಅತೃಪ್ತಿಯ ಪರಿಣಾಮಗಳು ಎಂದು ಹೇಳಬಹುದು.

> ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳಲ್ಲಿ ಒಬ್ಬರು. ಚೆನ್ನೈನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಇವರು ಉತ್ತಮ ವಾಗ್ಮಿಗಳು ಮತ್ತು ಪ್ರಬುದ್ಧ ಬರಹಗಾರರು ಕೂಡ.

ಆದ್ದರಿಂದಲೇ ಈಗ ಉಪನಿಷತ್ತುಗಳ ಆವಶ್ಯಕತೆ ಹೆಚ್ಚಾಗಿ ಎದ್ದು ಕಾಣುತ್ತಿದೆ. ಉಪನಿಷತ್ (ವೇದಾಂತ) ಧರ್ಮವೊಂದೇ ಭವಿಷ್ಯದ ಏಕಮಾತ್ರ ಭರವಸೆಯಾಗಿ ತೋರುತ್ತಿದೆ.

'ಉಪನಿಷತ್ತುಗಳ ಸಂದೇಶ' ಸಾರ್ವಭೌಮಿಕವಾದುದು. ಬೌದ್ಧ, ಜೈನ, ಸಿಖ್ ಇತ್ಯಾದಿ ಧರ್ಮಗಳಲ್ಲಿಯೂ ಉಪನಿಷತ್ತಿನ ಸಂದೇಶಗಳಿರುವ ಕುರುಹುಗಳನ್ನು ನೋಡುತ್ತೇವೆ. ಭಗವದ್ಗೀತೆ, ಪುರಾಣಗಳು, ರಾಮಾಯಣ, ಮಹಾಭಾರತ, ಸಂತ ಮಹಾತ್ಮರುಗಳ ವಚನಗಳು, ಹಾಡುಗಳು – ಇವೆಲ್ಲದರಲ್ಲಿಯೂ ಉಪನಿಷತ್ ಸಂದೇಶದ ಛಾಪು ಇರುವುದು ಕಾಣಬರುತ್ತದೆ.

> **ಆಧುನಿಕ ಭಾಷೆಯಲ್ಲಿ ಉಪನಿಷತ್ತಿನ ಸಂದೇಶವೆಂದರೆ ಪ್ರಪಂಚದ ವಸ್ತುಗಳಲ್ಲಿ ಒಂದು ಅಂತಿಮ ಏಕತೆಯನ್ನು ಕಂಡುಹಿಡಿಯುವುದು. ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಹಿಡಿಯವುದೇ ಜ್ಞಾನ, ಮತ್ತೇನೂ ಅಲ್ಲ. ಪ್ರತಿಯೊಂದು ವಿಜ್ಞಾನವೂ ನಿಂತಿರುವುದು ಐಕ್ಯತೆಯ ಆಧಾರದ ಮೇಲೆ. ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಹಿಡಿಯುವುದೇ ಎಲ್ಲ ಜ್ಞಾನಗಳ ಗುರಿ. ನಾವು ವಿಜ್ಞಾನವೆನ್ನುವುದು ಅಂಶಜ್ಞಾನ. ಇದರ ಹಿಂದಿರುವ ಏಕತೆಯನ್ನು ಕಂಡುಹಿಡಿಯುವುದು ವಿಜ್ಞಾನದ ಗುರಿ...ಇದೇ ಉಪನಿಷತ್ತಿನ ಗುರಿ.**
>
> **–ಸ್ವಾಮಿ ವಿವೇಕಾನಂದ**

ಉಪನಿಷತ್ತುಗಳ ಸತ್ಯಗಳು ಋಷಿ ಮುನಿಗಳ ಅನುಭವಗಳ ಅಡಿಗಲ್ಲಿನ ಮೇಲೆ ನಿಂತಿವೆ. ಆ ಅನುಭವಗಳನ್ನು ಮತ್ತೊಮ್ಮೆ ನಾವು ನಿರೀಕ್ಷಿಸಬಹುದು, ಪರೀಕ್ಷಿಸಲೂಬಹುದು. ಅದರ ನಿರ್ಣಯಗಳು ಎಲ್ಲ ಜನಗಳಿಗೂ, ಎಲ್ಲ ದೇಶದವರಿಗೂ, ಎಲ್ಲ ಕಾಲದವರಿಗೂ ಸಮಾನವಾಗಿ ಅನ್ವಯಿಸುತ್ತವೆ. ಆ ಸಂದೇಶಗಳಿಗೆ ಮಾನವನ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಬಲ್ಲ ಅದ್ಭುತ ಸಾಮರ್ಥ್ಯ ಇದೆ. ಅದಕ್ಕಾಗಿಯೇ ಅವು ಅನುಷ್ಠಾನಯೋಗ್ಯ ಸಂದೇಶಗಳು. ಹಾಗೆಯೇ ಅವು ಎಲ್ಲ ಮಾನವರ ಸಾಮಾನ್ಯ ಅನುಭವದ ಜೊತೆಗೆ ನಿಕಟ ಸಂಬಂಧ ಹೊಂದಿವೆ. ಆದ್ದರಿಂದ ಅವು ಗಹನವಾದ ಮನೋವೈಜ್ಞಾನಿಕ ಆಯಾಮವನ್ನೂ ಹೊಂದಿವೆ. ಹೀಗಾಗಿ ಉಪನಿಷತ್ತುಗಳ ಅಧ್ಯಯನ ಈಗಿನ ಕಾಲದಲ್ಲಿಯೂ ಅತ್ಯಂತ ಪ್ರಯೋಜನಕಾರಿಯಾದುದು ಮಾತ್ರವಲ್ಲ, ಅತೀ ಅವಶ್ಯಕವಾದುದು.

### ಮಾನವನ ನೈಜ ಸ್ವರೂಪ

ಉಪನಿಷತ್ತುಗಳ ಪ್ರಕಾರ ಆತ್ಮವೆಂಬ ಪಾರಮಾರ್ಥಿಕ ನಿತ್ಯ ವಸ್ತುವಿನಿಂದಲೇ ಎಲ್ಲ ಸೃಷ್ಟಿಯೂ ಹೊರಬಂದಿದೆ. ಚೈತನ್ಯ, ಜ್ಞಾನ, ಆನಂದ ಮತ್ತು ಅನಂತತೆ – ಇವು ಇದರ ಸ್ವರೂಪ ಲಕ್ಷಣಗಳು. ಹಾಗಾದರೆ ಉಪನಿಷತ್ತುಗಳಲ್ಲಿ ಮಾನವನ ಸ್ಥಾನ ಏನು? – ಇದು ಅಧ್ಯಯನ ಮಾಡಬೇಕಾದ ಮಹತ್ವದ ವಿಷಯ.

ಉಪನಿಷತ್ತಿನ ದೃಷ್ಟಿಯಲ್ಲಿ ಮನುಷ್ಯನು ಅವನತಿ ಹೊಂದಿರುವ ದಿವ್ಯಸ್ವರೂಪನೇ (ಆತ್ಮ) ಹೊರತು, ಡಾರ್ವಿನ್ ಹೇಳುವ ಹಾಗೆ, ವಿಕಾಸಹೊಂದಿರುವ ಕಪಿಯಲ್ಲ!

ಮಾನವನ ಹೃದಯಾಂತರಾಳದ ಬಯಕೆ, ಆಧ್ಯಾತ್ಮಿಕ ವಿಕಾಸವೇ ಹೊರತು, ನಾವು ತಿಳಿದುಕೊಂಡಿರುವಂತೆ, ಕೇವಲ ಇಂದ್ರಿಯಭೋಗವಲ್ಲ; ಐಹಿಕವಾದ ಕೀರ್ತಿ ಪದವಿಗಳೂ ಅಲ್ಲ. ಮಾನವನ ನೈಜಸ್ವರೂಪ ಅನಂತವಾದುದು. ಆತನ ಅಸ್ತಿತ್ವವೂ ಅನಂತವಾದುದು. ಅವನು ಅನಂತ ಮತ್ತು ನಿತ್ಯವಾದ ಜ್ಞಾನ ಹಾಗೂ ಆನಂದಗಳ ಆಗರವಾಗಿದ್ದಾನೆ. ಆದರೆ, ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯಕೋಶ, ವಿಜ್ಞಾನ ಮಯ ಕೋಶ (ಬುದ್ಧಿ) ಗಳೆಂಬ ಹೊದಿಕೆಗಳಿಂದ ಅವನ ನೈಜ ಆನಂದ ಸ್ವರೂಪವು ಕವಿದಿದೆ, ಅಷ್ಟೆ. ಈ ಕೋಶಗಳಲ್ಲಿ ತಾದಾತ್ಮ್ಯಗೊಂಡಿರುವುದರಿಂದಲೇ ಅವನು ತನ್ನನ್ನು ಅಲ್ಪಜ್ಞ ನೆಂಬಂತೆ, ದುಃಖಿಯೆಂಬಂತೆ ಭಾವಿಸಿಕೊಂಡು ನರಳುತ್ತಿದ್ದಾನೆ. ಈ ಕೋಶಗಳನ್ನು ಕಳಚಿಹಾಕುವುದೇ ಮೋಕ್ಷ ಅಥವಾ ಸ್ವಸ್ವರೂಪ ಜ್ಞಾನ. ಪರಿಶುದ್ಧವಾದ ಚೈತನ್ಯವು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳೊಂದಿಗೆ ತಾದಾತ್ಮ್ಯಗೊಳ್ಳುವುದೇ ಮಾನವ ತಾನು ಜೀವಿ ಎಂದು ಕರೆದುಕೊಳ್ಳುವುದಕ್ಕೆ ಕಾರಣ. ಅದೇ ಬಂಧನ.

ಈ ಬಂಧನಕ್ಕೆ ಕಾರಣ ಅವಿದ್ಯೆ ಅಥವಾ ತಪ್ಪು ತಿಳಿವಳಿಕೆ. ಮನುಷ್ಯ ತನ್ನ ಸ್ವರೂಪವನ್ನು ಮರೆತಿರುವುದೇ ಅದಕ್ಕೆ ಕಾರಣ. ಅದರಿಂದಲೇ ಅವನು ತನ್ನ ಜೀವಿತದಲ್ಲಿ ಬರುವ ಅನೇಕ ಸಂಕಷ್ಟಗಳಿಂದ ನರಳುವುದು. ಈ ತಪ್ಪು ಭಾವನೆಯನ್ನು ಬಿಟ್ಟು, ತಾನು ಸಚ್ಚಿದಾನಂದ ಸ್ವರೂಪನೆಂದು ತಿಳಿದು, ಸ್ವಾತ್ಮಾನಂದದಲ್ಲಿ ಸುಖಿಸುವುದೇ, ಎಲ್ಲ ದುಃಖಗಳನ್ನೂ ಶಾಶ್ವತವಾಗಿ ಅಳಿಸಿಹಾಕು ವುದಕ್ಕೆ ಇರುವ ಏಕಮಾತ್ರ ಮಾರ್ಗ.

## ಜ್ಞಾನದ ಮಹತ್ವ

ಯೋಗಸಾಧನೆಯಿಂದ ಈ ಬಗೆಯ ಜ್ಞಾನವನ್ನು ಪಡೆಯ ಬಹುದು ಎಂದು ಉಪನಿಷತ್ತುಗಳು ಬೋಧಿಸುತ್ತವೆ. ಆತ್ಮಜ್ಞಾನವು ಇಂದ್ರಿಯಾತೀತ ಅನುಭವವನ್ನು ತಂದುಕೊಡುತ್ತದೆ; ಎಲ್ಲ ಬಗೆಯ ಸಂಶಯಗಳನ್ನು ನಾಶಮಾಡುತ್ತದೆ; ಮನಸ್ಸನ್ನು ಕ್ಷುದ್ರವಾದ ಇಂದ್ರಿಯಸುಖಗಳಿಂದ ವಿಮುಖವನ್ನಾಗಿ ಮಾಡಿ ಪರಿಶುದ್ಧಗೊಳಿಸುತ್ತದೆ. ಈ ಅರಿವು ಸಾಧಕನ ಜೀವನದಲ್ಲಿ ಮೂಲ ಭೂತ ಪರಿವರ್ತನೆಯನ್ನು ತರುತ್ತದೆ; ಮಾನವನ ಅಂತರಾಳದಲ್ಲಿ ಮನೆಮಾಡಿರುವ ಎಲ್ಲಾ ಭಯ ಮತ್ತು ದುಃಖಗಳಿಂದ ಅವನನ್ನು ಬಿಡುಗಡೆ ಮಾಡುತ್ತದೆ.

ಈ ಬಗೆಯ ಜ್ಞಾನವನ್ನು ಗಳಿಸುವುದೇ, ಆ ಮೂಲಕ ದಿವ್ಯ ಅನುಭವವನ್ನು ಪಡೆಯುವುದೇ ಮಾನವ ಜೀವಿತದ ಗುರಿ ಎಂದು ಉಪನಿಷತ್ತುಗಳು ಘೋಷಿಸುತ್ತವೆ. ಮುಕ್ತಿ ಎಂದರೆ ಮಾನವನು ಸತ್ತ ಮೇಲೆ ಪಡೆಯುವ ಸ್ಥಿತಿಯಲ್ಲ, ಬದುಕಿರುವಾಗಲೇ ಮುಕ್ತನಾಗಬೇಕು ಎಂದು ಉಪನಿಷತ್ತುಗಳು ಬೋಧಿಸುತ್ತವೆ.

## ಉಪನಿಷತ್ ಸಂದೇಶದ ಕೆಲವು ವೈಶಿಷ್ಟ್ಯಗಳು

**ಧರ್ಮ, ಅರ್ಥ, ಕಾಮ** ಮತ್ತು **ಮೋಕ್ಷ** – ಇವು ನಾಲ್ಕು ಪುರುಷಾರ್ಥಗಳು. ಅವುಗಳಲ್ಲಿ ಮೋಕ್ಷವು ಅತ್ಯುನ್ನತವಾದ ಪುರುಷಾರ್ಥ ಎಂದು ಉಪನಿಷತ್ತುಗಳು ಹೇಳುತ್ತವೆ. ಮೋಕ್ಷ ಕ್ಕಾಗಿಯೇ ಉಳಿದ ಪುರುಷಾರ್ಥಗಳನ್ನು ಬಳಸಿಕೊಳ್ಳಬೇಕು ಎಂದು ಅವು ಸಾರುತ್ತವೆ. ಧರ್ಮಕಾರ್ಯಗಳು ಅಥವಾ ಪುಣ್ಯ ಕಾರ್ಯಗಳು ಮೋಕ್ಷದ ಸಾಧನೆಗೆ ಅನುಕೂಲವಾಗಿರುವಂಥವು. ಹಾಗೆಯೇ ನಮ್ಮ ಎಲ್ಲಾ ಕರ್ಮಗಳೂ, ಚಿಂತನೆ ಮತ್ತು ಮಾತು ಗಳೂ ಮೋಕ್ಷಸಾಧನೆಗೆ ಸಹಾಯಕವಾಗಿರಬೇಕು ಎಂದು ಉಪನಿಷತ್ತುಗಳು ಹೇಳುತ್ತವೆ.

ಉಪನಿಷತ್ತುಗಳಲ್ಲಿ ನಾವು ಧರ್ಮಸಮನ್ವಯವನ್ನೂ ಕಾಣು ತ್ತೇವೆ. ಋಗ್ವೇದದಲ್ಲಿ **ಏಕಂ ಸತ್ ವಿಪ್ರಾ ಬಹುಧಾ ವದಂತಿ** – ಸತ್ಯ ಒಂದೇ, ತಿಳಿದವರು ಅದನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವರು ಎಂಬ ಮಾತು ಬರುತ್ತದೆ. ಇದು ಉಪನಿಷತ್ತುಗಳ ಸಂದೇಶವೂ ಆಗಿದೆ ಎಂದು ಹೇಳಬಹುದು. ವಿವಿಧ ಧರ್ಮ ಗಳು ಭಗವಂತನ ಕಡೆಗೆ ಹೋಗುವ ವಿವಿಧ ದಾರಿಗಳೇ ಹೊರತು ಬೇರೇನಲ್ಲ ಎಂಬುದು ಇದರ ಆಶಯ. ಈ ಸಂದೇಶದಿಂದ ಎಲ್ಲ ಧರ್ಮಗಳೂ ಪ್ರೀತಿಯಿಂದ ಬಾಳಲು ಅನುಕೂಲವಾಗುತ್ತದೆ. ವಿವಿಧತೆಯಲ್ಲಿ ಏಕತೆಯನ್ನು ಕಾಣುವುದಕ್ಕೆ ಬೇಕಾದ ಸೂತ್ರ ಇಲ್ಲಿದೆ.

## ಮಾನವತೆಗೆ ಉಪನಿಷತ್ತುಗಳ ಕೊಡುಗೆ

ಧಾರ್ಮಿಕ ಪ್ರಜಾಪ್ರಭುತ್ವ (Religious Democracy) - ಇದು ಉಪನಿಷತ್ತುಗಳು ಮಾನವತೆಗೆ ನೀಡಿರುವ ದೊಡ್ಡ ಕೊಡುಗೆ ಎನ್ನಬಹುದು. ಛಾಂದೋಗ್ಯ ಉಪನಿಷತ್ತಿನಲ್ಲಿ ಗುರು ಶಿಷ್ಯನಿಗೆ ಹೇಳುತ್ತಾನೆ: **ತತ್ ತ್ವಮ್ ಅಸಿ** – ನೀನು ಅದೇ ಆಗಿದ್ದೀಯೆ ಎಂದು. ಹೀಗೆ ಎಲ್ಲರಲ್ಲೂ ಇರುವ ಆತ್ಮವು ಒಂದೇ ಆಗಿದೆ ಮತ್ತು ಅದು ದಿವ್ಯಸ್ವರೂಪವಾದುದು ಎನ್ನುವ ಉಪನಿಷತ್ತುಗಳ ಸಂದೇಶವು ಮಾನವತೆಯ ಏಕತೆಯನ್ನು ಪ್ರತಿಪಾದಿಸುತ್ತದೆ. ಈ ಸಂದೇಶವನ್ನು ಆಧಾರವಾಗಿ ಇಟ್ಟುಕೊಂಡು, 'ಮಾನವನ ಸೇವೆಯೇ ಮಹೇಶ್ವರನ ಸೇವೆ' ಎಂದು ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ್ದಾರೆ.

ಪ್ರಾಯೋಗಿಕವಾಗಿಯೂ ಈ ಸಂದೇಶವು ಅನುಷ್ಠಾನಯೋಗ್ಯ ವಾದದು. ಒಬ್ಬರು ಇನ್ನೊಬ್ಬರನ್ನು ತುಳಿಯಬಾರದು; ಹಿಂಸಿಸ ಬಾರದು. ಏಕೆಂದರೆ, ಎಲ್ಲರಲ್ಲಿಯೂ ದಿವ್ಯಾತ್ಮವು ಏಕರೂಪವಾಗಿ ನೆಲೆನಿಂತಿದೆ. ಹಾಗೆಯೇ ಯಾವ ಮತದವರೂ ಇನ್ನೊಂದು ಮತದವರನ್ನು ಮತಾಂತರ ಮಾಡುವಂತೆ ಬಲಾತ್ಕರಿಸಬಾರದು. ಏಕೆಂದರೆ, ಎಲ್ಲ ಮತಗಳಿಗೆ ಸೇರಿದ ದೇವರೂ ಒಬ್ಬನೇ ಆಗಿದ್ದಾನೆ. ಎಲ್ಲ ಮತಗಳೂ ಅವನಲ್ಲಿಗೆ ನಮ್ಮನ್ನು ಒಯ್ಯುವ ದಾರಿಗಳೇ ಆಗಿವೆ.

## ಆಧ್ಯಾತ್ಮಿಕ ಏಕತೆ

ವಿಜ್ಞಾನವು ಜಡಪದಾರ್ಥಗಳ ನಡುವೆ ಇರುವ ಏಕತೆಯನ್ನು ಕಂಡುಹಿಡಿಯಲು ಪ್ರಯತ್ನ ಪಡುತ್ತಿದೆ. ಉಪನಿಷತ್ತುಗಳು ಸಾವಿರಾರು ವರ್ಷಗಳ ಹಿಂದೆಯೇ, ಅಂತಹ ಏಕತೆಯು ಸಾಧ್ಯವಾಗುವುದು ಆಧ್ಯಾತ್ಮಿಕತೆಯ ನೆಲೆಯಲ್ಲಿ ಮಾತ್ರ ಎಂದು ತೋರಿಸಿಕೊಟ್ಟಿವೆ. ಎಲ್ಲ ಕಾಲಗಳಲ್ಲೂ ಹಾಗೂ ಎಲ್ಲ ಪ್ರದೇಶಗಳಿಗೂ ಸಮಾನವಾದ ಈ ಏಕತೆಯೇ ನೈತಿಕತೆಗೆ ಆಧಾರವಾಗಿದೆ. ಇತರರ ಕಷ್ಟವೂ ನನ್ನ ಕಷ್ಟವೇ ಎಂಬ ಸಮಾನಭಾವನೆಯೇ ಎಲ್ಲ ನೈತಿಕ ಭಾವನೆಗಳ ಮೂಲ.

**ವಿಶ್ವಪ್ರೇಮ, ಸೇವೆ, ತ್ಯಾಗ** ಎಂಬ ಮಹಾನ್ ಆದರ್ಶಗಳ ಬಗ್ಗೆ ಕೇಳಿದ್ದೇವೆ. ಋಷಿಗಳು ಉಪನಿಷತ್ತುಗಳಲ್ಲಿ ತೋರಿಸಿಕೊಟ್ಟ ಈ ಆಧ್ಯಾತ್ಮಿಕ ಏಕತೆಯೇ ಅವುಗಳ ಮೂಲ. ಒಬ್ಬನೇ ಸೂರ್ಯನಿಗೆ ಸಹಸ್ರಾರು ಕಿರಣಗಳಿದ್ದಂತೆ, ನಾವೆಲ್ಲರೂ ಒಬ್ಬನೇ ಭಗವಂತನ ಮೂರ್ತರೂಪರು ಎಂಬ ಭಾವನೆಯನ್ನು ಉಪನಿಷತ್ತುಗಳು ನಮಗೆ ಉಪದೇಶ ಮಾಡುತ್ತವೆ.

ಆರ್ಥಿಕ ಏಕತೆ, ಸಾಮಾಜಿಕ ಏಕತೆ, ಸಾಂಸ್ಕೃತಿಕ ಏಕತೆ ಎಂಬ ಪರಿಕಲ್ಪನೆಗಳಿವೆ. ಅವು ಎಂದಾದರೂ ಸಾಕಾರವಾಗಬೇಕಾದರೆ, ಅವೆಲ್ಲಕ್ಕೂ ಅಡಿಪಾಯವಾದ ಆಧ್ಯಾತ್ಮಿಕ ಏಕತೆಯ ಭಾವನೆಯ ಅರಿವು ಮೂಡಬೇಕು. ಹಾಗೆಯೇ ವಿಶ್ವಭ್ರಾತೃತ್ವವನ್ನು ಕೂಡ ಈ ಆಧ್ಯಾತ್ಮಿಕ ಏಕತೆಯ ಅಡಿಗಲ್ಲಿನ ಮೇಲೆಯೇ ಸಾಧಿಸಬೇಕು ಎನ್ನುವುದು ಕೂಡ ಸ್ಪಷ್ಟ.

ಉದಾರ ಮನಸ್ಸು, ಮತಮತಗಳ ನಡುವಣ ಸೌಹಾರ್ದ, ಕುಲ–ಜಾತಿ–ಲಿಂಗಗಳಲ್ಲಿ ಸಮಾನತೆ – ಇವೆಲ್ಲವೂ ಆಧ್ಯಾತ್ಮಿಕ ಏಕತೆಯ ಅನುಭವದ ಮೂಲಕವೇ ಬರುವಂಥದ್ದು. ಇವೆಲ್ಲವೂ ಆಧ್ಯಾತ್ಮಿಕ ಏಕತೆಯ ಪರಿಣಾಮಗಳೇ ಆಗಿವೆ. ಅಂತಹ ಆಧ್ಯಾತ್ಮಿಕ ಏಕತೆಯನ್ನು ಉಪನಿಷತ್ತುಗಳು ಉಪದೇಶಿಸುತ್ತವೆ.

## ರಾಮಕೃಷ್ಣ–ವಿವೇಕಾನಂದರ ಕೊಡುಗೆ

ಉಪನಿಷತ್ತುಗಳು ಇಷ್ಟೆಲ್ಲ ಉದಾತ್ತ ಗುಣಗಳನ್ನು ನಮಗೆ ಬೋಧಿಸುತ್ತವೆ. ಆದರೂ ಭಾರತ ದೇಶದ ಸಾವಿರ ವರ್ಷಗಳ ಇತಿಹಾಸದಲ್ಲಿ ಬರಿಯ ದಾಸ್ಯ, ದಾರಿದ್ರ್ಯ, ದುಃಖಗಳನ್ನೇ ಏಕೆ ನಾವು ಕಾಣುತ್ತೇವೆ? ಉಪನಿಷತ್ತುಗಳನ್ನು ನಮ್ಮ ಜನಗಳಿಗೆ ಸರಿಯಾದ ರೀತಿಯಲ್ಲಿ ಬೋಧನೆ ಮಾಡದಿದ್ದುದೇ ಇದಕ್ಕೆ ಮುಖ್ಯ ಕಾರಣ ಎಂದು ಹೇಳಬಹುದು. ಎರಡನೆಯ ಕಾರಣವೆಂದರೆ, ಹೊರಗಣ ರಾಷ್ಟ್ರಗಳು, ಮುಖ್ಯವಾಗಿ ಮೊಗಲರು ಮತ್ತು ಬ್ರಿಟಿಷರು, ನಮ್ಮ ದೇಶದ ಮೇಲೆ ದಾಳಿ ಮಾಡಿ ನಮ್ಮ ಸಂಸ್ಕೃತಿಯನ್ನು ಧ್ವಂಸಮಾಡಲು ಯತ್ನಿಸಿದ್ದು. ಆಧ್ಯಾತ್ಮಿಕ ಜೀವನಕ್ಕೆ ಮೊದಲು ಭೌತಿಕ ಪ್ರಗತಿ ಆಗಬೇಕು; ನಾವು ಬಡವರ ದಾರಿದ್ರ್ಯವನ್ನು ನಿವಾರಿಸಲು ಪ್ರಯತ್ನಪಡಬೇಕು ಎಂಬುದನ್ನು ಮರೆತು ಬರೀ ಒಣವೇದಾಂತದ ಉಪದೇಶದಲ್ಲಿಯೇ ಕಾಲವನ್ನು ಕಳೆದದ್ದು ಮೂರನೆಯ ಕಾರಣ.

ಇವುಗಳಿಂದ ಹುಸಿವೇದಾಂತ ಹರಡಿತು. ಸ್ವಾರ್ಥಪರತೆ, ಎಲ್ಲ ನಮ್ಮ ಹಣೆಯ ಬರಹ ಎಂಬ ಗೊಡ್ಡು ನಂಬಿಕೆ, ಎಲ್ಲವೂ ಮಾಯೆ ಮತ್ತು ಭ್ರಮೆ ಎಂಬ ಹುಸಿ ತತ್ತ್ವವಿಚಾರ, ಭೌತಿಕ ವಿಜ್ಞಾನ ಮತ್ತು ತಾಂತ್ರಿಕತೆಗಳನ್ನು ನಮ್ಮ ಜನಕ್ಕೆ ಕಲಿಸದೆ ಇದ್ದದ್ದು – ಇವೆಲ್ಲವೂ ಸಾಮಾಜಿಕ ಅವನತಿಗಳಿಗೆ ಕಾರಣವಾದುವು.

ಇವನ್ನು ಸರಿಪಡಿಸಲೆಂದು ಮತ್ತು ಉಜ್ವಲ ಭವಿಷ್ಯದ ಭಾರತವನ್ನು ನಿರ್ಮಾಣ ಮಾಡಲೆಂದೇ ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಅವತರಿಸುವ ಆವಶ್ಯಕತೆ ಒದಗಿ ಬಂತು.

ಪ್ರಪಂಚ ಬರೀ ಹುಸಿ ಅಥವಾ ಮಾಯೆಯಲ್ಲ; ಅದು ಬ್ರಹ್ಮವೇ ಆಗಿದೆ; ಪ್ರಪಂಚವೆಂದರೆ ಬ್ರಹ್ಮನ ಅಪರರೂಪವಾದ ಬ್ರಹ್ಮಶಕ್ತಿಯ ಆವಿರ್ಭಾವ ಎಂದು ಇವರು ಬೋಧಿಸಿದರು. ಆ ಮೂಲಕ ನಮ್ಮ ದೈನಂದಿನ ಮತ್ತು ಸಾಮಾಜಿಕ ಜೀವನಗಳಲ್ಲಿ ಅನುಷ್ಠಾನವೇದಾಂತಕ್ಕೆ, ಅಂದರೆ ತ್ಯಾಗ–ಸೇವೆಗಳಿಂದ ಕೂಡಿದ ಜೀವನಕ್ಕೆ, ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಪ್ರಮುಖ ಸ್ಥಾನವನ್ನು ಕೊಟ್ಟರು. ಇದರಿಂದ ನಮ್ಮ ವೈಯಕ್ತಿಕ ಜೀವನಕ್ಕಲ್ಲದೆ, ಸಾಮಾಜಿಕ ಹಾಗೂ ರಾಷ್ಟ್ರೀಯ ಜೀವನಗಳಿಗೆ ಸ್ಫೂರ್ತಿ ಚೈತನ್ಯಗಳನ್ನು ತುಂಬುವ ಮಹಾನ್ ಕಾರ್ಯವನ್ನು ಇವರಿಬ್ಬರು ಮಾಡಿದ್ದಾರೆ.

## ಉಪಸಂಹಾರ

**ಸರ್ವಂ ಖಲ್ವಿದಂ ಬ್ರಹ್ಮ** – ಎಲ್ಲವೂ ಬ್ರಹ್ಮವೇ ಆಗಿದೆ ಎನ್ನುತ್ತದೆ ಉಪನಿಷತ್ತು. ಹಾಗಾದರೆ ಪ್ರತಿಯೊಂದು ಜೀವಿಯಲ್ಲಿಯೂ ಆ ಬ್ರಹ್ಮವೇ ನೆಲೆಸಿರಬೇಕಲ್ಲವೇ? ಆದ್ದರಿಂದ ಮಾನವನ ಸೇವೆ ಎನ್ನುವುದು ಮಹೇಶ್ವರನ ಸೇವೆಯಲ್ಲದೆ ಬೇರಲ್ಲ ಎಂದು ವೇದಾಂತ ಕೇಸರಿಯಾದ ಸ್ವಾಮಿ ವಿವೇಕಾನಂದರು ಗರ್ಜಿಸಿದರು.

ಆತ್ಮಜ್ಞಾನವಿಲ್ಲದ ಆರ್ಥಿಕ ಸಂಪತ್ತು ಅಪಾಯಕರ ಎಂದು ಉಪನಿಷತ್ತುಗಳು ಹೇಳುತ್ತವೆ. ಅವು ಜ್ಞಾನ ಮತ್ತು ಅಭಯದ ಸಂದೇಶಗಳ ಗಣಿ ಎಂದು ಹೇಳಬಹುದು. ಇದನ್ನು ನಾವು ಸರಿಯಾಗಿ ಗ್ರಹಿಸಬೇಕು. ಉಪನಿಷತ್ತುಗಳು ಶ್ರೇಯಸ್ಸು ಮತ್ತು ಪ್ರೇಯಸ್ಸು ಎಂಬ ಎರಡು ದಾರಿಗಳನ್ನು ನಮ್ಮ ಮುಂದಿಟ್ಟು, ಶ್ರೇಯಸ್ಸಿನ ದಾರಿಯು ಒಳ್ಳೆಯದು ಎಂದು ಹೇಳುತ್ತವೆ. ಶ್ರೇಯಸ್ಸೆಂದರೆ ಆಧ್ಯಾತ್ಮಿಕ ಉನ್ನತಿ. ಪ್ರೇಯಸ್ಸು ಎಂದರೆ ಭೌತಿಕ ಬೆಳವಣಿಗೆ. ಆದರೆ ಶ್ರೇಯಸ್ಸಿಗೆ ಮಾತ್ರವೇ ಬೆಲೆಕೊಟ್ಟು ಪ್ರೇಯಸ್ಸನ್ನು ಕಡೆಗಣಿಸಬಾರದು.

ಹಿಂಸೆಯು ಶಾಂತಿಗೆ ಎಂದಿಗೂ ಕಾರಣವಾಗುವುದಿಲ್ಲ. ಪ್ರೀತಿ–ಸೌಹಾರ್ದಗಳಿಂದ ಮಾತ್ರವೇ ಶಾಂತಿಯು ದೊರಕಬಲ್ಲುದು. ಪ್ರೀತಿ–ಸೌಹಾರ್ದಗಳ ಮೂಲ ಆಕರ ಆಧ್ಯಾತ್ಮಿಕತೆ. ಅಂಥ ಜೀವನ ಪೋಷಕ ಆಧ್ಯಾತ್ಮಿಕ ಸತ್ಯಗಳ ಗಣಿಯೇ ಉಪನಿಷತ್ತುಗಳು.